International Journal of Kannada Research
www.kannadajournal.com

**ISSN: 2454–5813**
IJKR 2021; 7(3): 42-43
© 2021 IJKR
www.kannadajournal.com
Received: 24-08-2021
Accepted: 26-09-2021

**ಡಾ.ಬಾಳಪ್ಪ ಎ.ಬಿ.**
ಸಹ ಪ್ರಾಧ್ಯಾಪಕ ಮಧುಗಿರಿ,
ತುಮಕೂರು, ಕರ್ನಾಟಕ, ಭಾರತ

**Corresponding Author:**
**ಡಾ.ಬಾಳಪ್ಪ ಎ.ಬಿ.**
ಸಹ ಪ್ರಾಧ್ಯಾಪಕ ಮಧುಗಿರಿ,
ತುಮಕೂರು, ಕರ್ನಾಟಕ, ಭಾರತ

# ಹೊನ್ನುಂಗುರ ಬೆಡಗಿನ ಇತಿಹಾಸ

**ಡಾ.ಬಾಳಪ್ಪ.ಎ.ಬಿ.**

ಹಾಲುಮತದವರೆಂದೇ ಹೆಸರಾಗಿರುವ ‘ಕುರುಬ’ ಸಮುದಾಯದವರು ಜಗತ್ತಿನಾದ್ಯಂತ ಸಿಗಬಹುದಾದ ಸಮುದಾಯ. ಜನಾಂಗವಾಗಿ, ಒಂದು ಜಾತಿಯಾಗಿ, ಸಮುದಾಯವಾಗಿಯೂ ಕಾಣಸಿಗುವ ಇವರು ಭಾರತದಾದ್ಯಂತ ಅಲ್ಲಲ್ಲಿ ಚದುರಿದಂತೆ, ಕೆಲವೆಡೆ ಅತಿ ಹೆಚ್ಚಾಗಿ ನೆಲಸಿರುವ ಕುರುಬರು ಸಾಂಸ್ಕೃತಿಕವಾಗಿ ಏಕತೆಯಲ್ಲಿ ವೈವಿಧ್ಯತೆಯನ್ನು ಹೊಂದಿದವರು. ಈ ಸಮುದಾಯದ ಆಚರಣೆ, ಸಂಪ್ರದಾಯ, ಪದ್ಧತಿಗಳು ಒಂದೇ ರೀತಿ ಇದ್ದರೂ ವಿವಿಧ ಸ್ಥಳಗಳಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ. ಕುರುಬರು ದಕ್ಷಿಣ ಭಾರತದ ಮೂಲನಿವಾಸಿಗಳು ಎಂದು ಅನೇಕ ವಿದ್ವಾಂಸರ ಅಭಿಪ್ರಾಯ. ಕುರಿಸಾಕಾಣಿಕೆಯನ್ನೇ ಮೂಲ ಕಸುಬನ್ನಾಗಿಸಿಕೊಂಡು ಕಾಲಾನಂತರ ಇತರ ಸಮುದಾಯಗಳಂತೆ ಜೀವನ ಕ್ರಮ ಮತ್ತು ವೃತ್ತಿಯನ್ನು ಬದಲಿಸಿಕೊಂಡು ಕೃಷಿಕರಾದರು. ಇದರಿಂದಾಗಿ ಇವರಲ್ಲಿ ಒಳಪಂಗಡಗಳೂ ಕಂಡುಬರುತ್ತವೆ. ಇವರ ಮೂಲವನ್ನು ಕುರಿತಂತೆ ‘ಆರ್ಯಮೂಲವೆಂದು ಕೆಲವರೂ, ಮತ್ತೆ ಕೆಲವರು ದ್ರಾವಿಡ ಮೂಲವೆಂದು ಭಿನ್ನಾಭಿಪ್ರಾಯಗಳಿರಬಹುದಾದರೂ ಶ್ರಮ ಸಂಸ್ಕೃತಿಯ ವಕ್ತಾರರೆಂದರೆ ತಪ್ಪಾಗಲಾರದು.

ಹಾಲು ಹೈನವು ಲೇಸು । ಕೀಲು ಬಂಡಿಗೆ ಲೇಸು
ಶೀಲವುಳ್ಳಂಥ ಸತಿ ಲೇಸು । ಮತಗಳಲ್ಲಿ
ಹಾಲುಮತ ಲೇಸು ಸರ್ವಜ್ಞ ।

ಈ ಸರ್ವಜ್ಞನ ಮಾತು ಪ್ರಾಚೀನ ಕಾಲದಿಂದಲೂ ಕುರುಬರು ಹಾಲಿನಷ್ಟೇ ಪರಿಶುದ್ಧವಾದ ಮನಸ್ಸುಳ್ಳವರೂ, ಯಾರಿಗೂ ಕೆಡುಕು ಮಾಡದವರೂ ಆಗಿದ್ದರೆಂಬುದಕ್ಕೆ ಸಾಕ್ಷಿ ಈ ವಚನ. ‘ಕುರುಬ ಕೂಡಿ ಕೆಟ್ಟ ದೊಂಬ ಅಗಲಿ ಕೆಟ್ಟ’ ಮತ್ತು ಕುಮಾರವ್ಯಾಸ ಭಾರತದಲ್ಲಿ ‘ಕುರುಬರೂರಲಿ ಗಾಜು ಮಾಣಿಕವೇ’ ಎಂಬ ಮಾತುಗಳು ಅವರ ಮುಗ್ದತೆಯನ್ನೂ, ನಿರ್ಮಲ ಮನಸ್ಸನ್ನೂ ಸೂಚಿಸುತ್ತವೆ. ಅಂತಹ ಕುರುಬರಲ್ಲಿ ಬೆಡಗುಗಳು ಪ್ರಧಾನ ಪಾತ್ರವಹಿಸುತ್ತವೆ.

‘ಬೆಡಗು’ ಎಂದರೆ ‘ಕುಲಚಿಹ್ನೆ, ಕುಲಲಾಂಛನ’ ಎಂಬ ಸಾಮಾನ್ಯವಾದ ಅರ್ಥವಿದೆ. ಒಂದು ನಿರ್ಧಿಷ್ಟ ರಕ್ತ ಸಂಬಂಧಿ ಪಂಗಡದ ಸದಸ್ಯರು ವಿಶೇಷ ಆಧ್ಯಾತ್ಮ ಸಂಬಂಂ ಹೊಂದಿರುವ ವಸ್ತು ಅಥವಾ ಚಿಹ್ನೆ, ಆ ಚಿಹ್ನೆ, ಆ ವಸ್ತುವಿನ ಮೂಲಕವೇ ಬಂಧುತ್ವವನ್ನು ಗುರುತಿಸುವ ವಾಡಿಕೆಯಿದೆ. ಒಂದು ಸಮುದಾಯದಲ್ಲಿರುವ ವಿಶಿಷ್ಟ ಉಪಘಟಕಗಳಿಗೆ ಬೆಡಗು ಎನ್ನುವ ಅರ್ಥವೂ ಇದೆ. ಈ ಬೆಡಗುಗಳ ಹುಟ್ಟಿಗೆ ನಿರ್ಧಿಷ್ಟ ಕಾರಣ ಹೇಳಲು ಸಾಧ್ಯವಿಲ್ಲ. ಒಂದೇ ಸಮುದಾಯಕ್ಕೆ ಸೇರಿದ ಜನರು ಸಾಂಸ್ಕೃತಿಕ ಮತ್ತು ಭೌಗೋಳಿಕ ಪರಿಸ್ಥಿತಿಯಿಂದಾಗಿ ಬೇರೆ ಬೇರೆ ಕಡೆಗಳಲ್ಲಿ ವಾಸಿಸಲು ಪ್ರಾರಂಭಿಸಿದಾಗ ಅಂತಹ ಒಂದೊಂದು ಗುಂಪು ಒಂದೊಂದು ಬೆಡಗು ನಿರ್ಮಾಣವಾಗಿಬಹುದು. ಮದುವೆ ಸಂದರ್ಭದಲ್ಲಿ ಇವುಗಳನ್ನು ವಿಶಿಷ್ಟವಾಗಿ ಅನುಸರಿಸಲಾಗುತ್ತದೆ.

ಬೆಡಗುಗಳು ಕುಲಗೋತ್ರದ ಸ್ವರೂಪವನ್ನು ತಿಳಿಯಲು ಅಸ್ತಿತ್ವಕ್ಕೆ ಬಂದಂತೆ ಕಾಣುತ್ತವೆ. ಸಮುದಾಯವೊಂದರೆ ವಿಕಾಸದ ಎಷ್ಟೋ ವರ್ಷಗಳ ನಂತರ ಒಂದೇ ರಕ್ತಸಂಬಂಧಿಗಳಲ್ಲಿ ಹಲವಾರು ತಲೆಮಾರುಗಳ ಕಾಲ ವಿವಾಹ ಸಂಬಂಧಗಳು ಏರ್ಪಟ್ಟು ಜನಾಂಗದ ದೈಹಿಕ ಮತ್ತು ಮಾನಸಿಕ ಕ್ಷೀಣತೆ, ತೊಂದರೆಗಳಿಗೆ ಕಾರಣವಾದ ಮೇಲೆ ಭವಿಷ್ಯದ ದೃಷ್ಟಿಯಿಂದ ಇದು ಸೂಕ್ತವಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದು ಸಪಿಂಡ ಸೋದರ ಸಂಬಂಧಿ ವಿವಾಹ ಪ್ರಕ್ರಿಯೆಗಳನ್ನು ತಡೆಗಟ್ಟು ನಿಟ್ಟಿನಲ್ಲಿ

ಬೆಡಗುಗಳನ್ನು ವಿಂಗಡಿಸಲಾಗಿದೆ. ಕೆಲವೊಂದು ಬೆಡಗುಗಳನ್ನು ಸೋದರ ಬೆಡಗುಗಳು ಅಡ್ಡದಾಯಾದಿಗಳು ಎಂದು ಕರೆದು ಪರಸ್ಪರ ವಿವಾಹ ಸಂಬಂಧಗಳು ನಿಷೇಧಕ್ಕೊಳಗಾದವು. ಇದರ ಉದ್ದೇಶ ಮಾತ್ರ ಅನುಪಮವಾದುದು. ಅದೇನೆಂದರೆ ಸಮುದಾಯದ ಸ್ವಾಸ್ಥ್ಯ, ನೆಮ್ಮದಿ, ಏಳಿಗೆಗೆ ಪೂರಕವಾದ ರೀತಿಯಲ್ಲಿ ಇವುಗಳನ್ನು ವಿಂಗಡಿಸಿರಬಹುದು.

ಕುರುಬರ ಪ್ರಧಾನ ಪಂಗಡವಾದ ಉಣ್ಣೆ ಕಂಕಣ ಕುರುಬರಲ್ಲಿ ಕಂಡು ಬರುವ ಪ್ರಧಾನವಾದ ಬೆಡಗು 'ಹೊನ್ನುಂಗುರ' ಎಂಬುದು. ಕುರುಬ ಸಮುದಾಯದಲ್ಲಿ ಸರಿಸುಮಾರು ಒಂದು ಸಾವಿರಕ್ಕೂ ಮಿಗಿಲಾದ ಬೆಡಗುಗಳಿವೆ. ಅವೆಲ್ಲಕ್ಕೂ ಒಂದೊಂದು ಬಗೆಯ ಇತಿಹಾಸವಿದ್ದು ರೋಮಾಂಚನವನ್ನುಂಟು ಮಾಡುವಂತಿವೆ. ಅಂತಹ ಒಂದು ಬೆಡಗು ಹೊನ್ನುಂಗುರಕ್ಕೂ ತನ್ನದೇ ಚಾರಿತ್ರಿಕ ಮಹತ್ವವಿದೆ.

ಸುಮಾರು ಕ್ರಿ.ಶ. 1680ರ ಆಷಾಡ ಮಾಸದಲ್ಲಿ ಜರುಗಿದ ಘಟನೆ. ಮಡಕಶಿರಾ ತಾಲೂಕಿನಲ್ಲಿ ಇರುವ ಗುಂಡಾಮಲ್ಯೆ ಸಂಸ್ಥಾನದ ಆದಿಪತ್ಯ ಪಾರುಪತ್ಯದವರು ನಡೆಸಿದ ಶ್ರೀಕರಿಯಮ್ಮ ತಾಯಿಯ ಆರತಿ ಉತ್ಸವದಲ್ಲಿ ದೇವಿಯು ಪೂಜಾರಿಯ ಮೈದುಂಬಿ ಬಂದು ನರಬಲಿಯನ್ನು ಕೋರುತ್ತಾಳೆ. ಆಗ ದಳಪತಿಗಳು ಬೆಟ್ಟದ ಬುಡದಲ್ಲಿ ದನಗಾಹಿಯೋರ್ವನನ್ನು ಹಿಡಿದು ತಂದು ಬಲಿಗೊಟ್ಟು ಜಲ್ಲೆಯನ್ನು ಮುಚ್ಚಿದರು. ಈ ವಿಷಯವನ್ನು ತಿಳಿದ ಕುಂಪಣಿ(ಬ್ರಿಟಿಷ್) ಸರ್ಕಾರದ ಪೊಲೀಸ್ ಅಧಿಕಾರಿಗಳು ಮದ್ದುಗುಂಡುಗಳ ಸಮೇತ ಬೆಟ್ಟಕ್ಕೆ ಮುತ್ತಿಗೆ ಹಾಕಿದರು. ಇದನ್ನು ಕಂಡ ಜನಸ್ತೋಮ ದಿಕ್ಕಾಪಾಲಾಗಿ ಬೆಟ್ಟದಿಂದ ಏಳುತ್ತಾ ಬೀಳುತ್ತಾ ದಿಕ್ಕಾಪಾಲಾಗಿ ಕಾಡಿನಲ್ಲಿ ಕಣ್ಮರೆಯಾದರು. ಹೀಗೆ ದಿಕ್ಕುತಪ್ಪಿದ ಗುಂಡಾಮಲ್ಯೆ ಸಂಸ್ಥಾನದ ದೊರೆಮಕ್ಕಳಾದ 'ವಗ್ಗಪ್ಪ, ಮತ್ತು 'ಬರಮಪ್ಪ' ಎಂಬ ಎಂಟು ಹತ್ತು ವರ್ಷಗಳ ಬಾಲಕರು ಕಾಡುಮೇಡುಗಳನ್ನು ಅಲೆಯುತ್ತಾ ಸಿರಾ ತಾಲೂಕಿನ ಹುಲಿಕುಂಟೆಯ ಊರಮುಂದಿನ ಅರಳಿಕಟ್ಟೆಯ ಮೇಲೆ ಕುಳಿತು ಅಳುತ್ತಿದ್ದರು. ಆ ಊರಿನ ಗೌಡಿಕೆಯ ಶೆಟ್ಟೇನವರ 'ಶಿವಲಿಂಗಪ್ಪ' ಇವರನ್ನು ನೋಡಿ ಕನಿಕರ ಪಟ್ಟು ಇವರ ಪೂರ್ವಾಪರ ವಿಚಾರಗಳನ್ನು ತಿಳಿದು ತಮ್ಮ ಮನೆಯಲ್ಲಿಯೇ ಇರಿಸಿಕೊಳ್ಳುತ್ತಾರೆ.

ತರುವಾಯ ಗೌಡರು ವಗ್ಗಪ್ಪನನ್ನು ಕುರಿಯ ಆಡಳಿತಕ್ಕೂ(2000 ಕುರಿಗಳನ್ನು ನೋಡಿಕೊಳ್ಳಲು),ಬರಮಪ್ಪನನ್ನು ಮನೆಯ ಆಡಳಿತಕ್ಕೂ ನೇಮಿಸಿಕೊಂಡನು. ತನ್ನ ವಂಶದ ಸಣ್ಣನಾಗಮ್ಮನನ್ನು ವಗ್ಗಪ್ಪನಿಗೂ, ನಾಗಮ್ಮನನ್ನು ಬರಮಪ್ಪನಿಗೂ ಕೊಟ್ಟು ವಿವಾಹ ನೆರವೇರಿಸುತ್ತಾರೆ. ಹೀಗಿರುವಾಗ ವಗ್ಗಪ್ಪನಿಗೆ ಸಂತಾನವಾಗುವುದಿಲ್ಲ, ಆದರೆ ಬರಮಪ್ಪನಿಗೆ ವಂಶಾಭಿವೃದ್ಧಿಯಾಗಿ ಮುಂದುವರಿದು ಸುಖವಾಗಿರುತ್ತಾರೆ. ಈ ವಂಶಿಕರೇ ಗುಂಡಾಮಲ್ಯೆನಿಂದ ಸಿಡಿದು ಬಂದು ಸಿರಾ ತಾಲೂಕಿನ ಕಾಮಗೊಂಡನಹಳ್ಳಿ, ಬೇವಿನಹಳ್ಳಿ, ಸಿರಾನಗರದ ಕಾಳಿದಾಸನಗರಗಳಲ್ಲಿ ತಮ್ಮ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಕಂಡುಕೊಂಡಿದ್ದಾರೆಂಬುದನ್ನು ಈಗಲೂ ಅವಲೋಕಿಸಬಹುದು. ಈ ರೀತಿಯಲ್ಲಿ ಹೊನ್ನುಂಗುರ ಬೆಡಗು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

ಸುಮಾರು ಕ್ರಿ.ಶ. 1730ರ ವೇಳೆಗೆ ಅಂದರೆ 50 ವರ್ಷಗಳ ನಂತರ ಹುಲಿಕುಂಟೆಯ ಗೌಡಿಕೆಯ ಅಧೀನದಲ್ಲಿದ್ದ ಎರಡನೇ ತಲೆಮಾರಿನ ಮೈಲಾರಪ್ಪ ಎಂಬುಬರು ಹೇಮಾವತಿಯ ಹೆಂಜಾರು ಭೈರೇದೇವರ ಜಾತ್ರೆಯಲ್ಲಿ ಮಕ್ಕಳ ಆಟಕ್ಕಾಗಿ ಕುದುರೆ ಸವಾರಿ ಸಹಿತವಾಗಿರುವ ಎರಡು ಕಂಚಿನ ಗೊಂಬೆಗಳನ್ನು ತರುತ್ತಾರೆ. ಮಕ್ಕಳು ದೊಡ್ಡವರಾದ ಮೇಲೆ ಆ ಗೊಂಬೆಗಳನ್ನು ಅಡಕೆಪಟ್ಟೆಯಲ್ಲಿ ಕಟ್ಟಿ ರಾಗಿಕಣಜದ ಮೇಲೆ ಇಟ್ಟರು. ದಿನಗಳೆದಂತೆ ಈ ಗೊಂಬೆಗಳಿದ್ದ ಜಾಗದಿಂದ ಆಗಾಗ್ಗೆ ಪಟಪಟನೆ ಸದ್ದು ಕೇಳಿಸುತ್ತಿದ್ದು, ಮನೆಯಲ್ಲಿ ಸಂಕಷ್ಟಗಳು ಹೆಚ್ಚಾಗತೊಡಗಿದವು. ಈ ಬಗ್ಗೆ ಶಾಸ್ತ್ರ ಕೇಳಿಸಲಾಗಿ ನಿಮ್ಮ ಮನೆಯನ್ನು ಮೈಲಾರ ದೇವರು ಹೊಕ್ಕಿರುವುದರಿಂದ ಇದನ್ನು ನಿಮ್ಮ ಮನೆಯ ದೇವರಾಗಿ ಸ್ವೀಕರಿಸಿ ಎಂದು ಹೇಳುತ್ತಾರೆ. ಇದರಂತೆ ಮೈಲಾರಪ್ಪನವರ ಹಿರಿಯ ಮಗನಾದ ನಿಂಗಪ್ಪನು ಗೊರವನೊಡಗೂಡಿ ಶ್ರೀಕ್ಷೇತ್ರ ಹಿರೆಮೈಲಾರಕ್ಕೆ ಕಾಲ್ನಡಿಗೆಯಲ್ಲಿಯೇ ದಟ್ಟವಾದ ಕಾಡುಗಳ ನಡುವೆ ಸಾಗಿ ಮೈಲಾರದಲ್ಲಿ ಗುರುಗಳಿಂದ ದೇವತಾ ಸ್ಥಾಪನೆಗೆ ಬೇಕಾದ ಲಿಂಗ ಭೂತಾಳೆ ಮುಂತಾದವುಗಳನ್ನು ಪಡೆದು ದಟ್ಟಡವಿಯ ಮಧ್ಯೆ ಬರುವಾಗ ರಾಣಿಬೆನ್ನೂರಿನ ಕಾಡಿನ ನಡುವೆ ಹುಲಿಯೊಂದು ಅಡ್ಡ ಬರುತ್ತದೆ. ದೇವರ ಪ್ರೇರಣೆಯಿಂದ ಗೊರವನು ಮೈದುಂಬಿ ಹುಲಿಯ ಸುತ್ತ ನರ್ತಿಸುತ್ತಾನೆ. ಆ ವೇಳೆಗೆ ಹುಲಿಯ ಪ್ರಾಣವು ಹೋಗಿರುತ್ತದೆ.

ಅಲ್ಲಿಂದ ಮುಂದೆ ಸಾಗಿದ ಇವರು ಶಿರಾ ತಾಲೂಕಿನ ಬರಗೂರಿನ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ವಿಧಿವಿಧಾನಗಳಿಂದ ಇದನ್ನು ಪ್ರತಿಷ್ಠಾಪಿಸಿ ಈವರೆಗೆ ವಾಸವಿದ್ದ ಇಟ್ಟಿಗೆಹಳ್ಳಿ ಲಿಂಗಪ್ಪ ಎಂಬ ಪೂಜಾರಿಯು ವಾರಕ್ಕೊಮ್ಮೆ ಬರಗೂರಿಗೆ ಬಂದು ಪೂಜೆಯನ್ನು ಸಲ್ಲಿಸುತ್ತಿದ್ದನು. ಅಂದಿನಿಂದ ಈ ಲಿಂಗಪ್ಪನೇ ಈ ದೇವರಿಗೆ ಮೊದಲ ಪೂಜಾರಿಯಾದನು. ತದನಂತರ ಈ ಮನೆತನದವರು 28 ವರ್ಷಗಳ ತರುವಾಯ ನಿಡಗಟ್ಟೆಗೆ ಬಂದು ನೆಲೆಸಿ ಅಲ್ಲಿ ದೇವಸ್ಥಾನವನ್ನು ಕಟ್ಟಿಸಿ ದೇವರನ್ನು ಪ್ರತಿಷ್ಠಾಪಿಸಿದರು. ಪೂಜಾರಿ ಮಾತ್ರ ಪ್ರತಿವಾರ ಇಟ್ಟಿಗೆಹಳ್ಳಿಯಿಂದಲೇ ನಿಡಗಟ್ಟೆಗೆ ಎತ್ತಿನ ಸಬರದಲ್ಲಿ ಪ್ರಯಾಣಿಸಿ ಪೂಜೆ ಸಲ್ಲಿಸುತ್ತಿದ್ದನು. ಇದಾದ ನಂತರ ಪೂಜಾರಿ ಮನೆತನದವರೂ ನಿಡಗಟ್ಟೆಗೆ ಬಂದು ನೆಲೆಸಿದರು.

ಪೂಜಾರಿ ಲಿಂಗಪ್ಪನಿಗೆ ಗಂಡುಮಕ್ಕಳಿಲ್ಲದ ಕಾರಣದಿಂದಾಗಿ ಇವನ ತಮ್ಮ ಕರಿಸಿದ್ದಜ್ಜನ ಹಿರಿಯ ಮಗನಾದ ಮೈಲಾರಪ್ಪನಿಗೆ ಪೂಜಾರಿಕೆಯ ದೀಕ್ಷೆಮಾಡುತ್ತಾರೆ. ಇವರ ಎರಡನೇ ತಲೆಮಾರಿನ ಸಿದ್ದಪ್ಪನ ಮಕ್ಕಳಾದ ನಿಂಗಜ್ಜ ನಷ್ಟ ಸಂತತಿ ಹೊಂದಿ ಎರಡನೇ ಮಗನಾದ ಲುಂಕಜ್ಜನಿಗೆ ಹಣ್ಣು ಹೂವಿನ ಹೆಡಿಗೆ ಹಂಚಿಕೆಯಾಗುತ್ತದೆ. ನಂತರ ಮೂರನೇ ಮಗ ಬರಮಪ್ಪನನ್ನು ಎರಡನೇ ತಲೆಮಾರಿನ ಮೂರನೇ ಲುಂಕಜ್ಜ ದತ್ತು ಪಡೆದನು. ಅವರಿಗೆ ತಣ್ಣೀರು ಬಿಂದಿಗೆ ಬಾಬತ್ತು ಹಂಚಿಕೆಯಾಯಿತು. ಕಳಸ, ಕೇಲು ಪೂಜಾರಿ ಗುಂಪಿಗೂ, ಹಣ್ಣುಹೂವಿನ ಹೆಡಿಗೆ ಗೌಡರ ಗುಂಪಿಗೂ, ತಣ್ಣೀರು ಬಿಂದಿಗೆ ಯಜಮಾನನ ಗುಂಪಿಗೆ ಪ್ರಾಪ್ತವಾಗಿ ಹೊನ್ನುಂಗುರ ಎಂಬ ಬೆಡಗು ಉಣ್ಣೆ ಕಂಕಣ ಕುರುಬರಲ್ಲಿ ಹುಟ್ಟಿಕೊಂಡದ್ದನ್ನು ಚಾರಿತ್ರಿಕವಾಗಿ ಮನಗಾಣಬಹುದು.

ಒಟ್ಟಾರೆಯಾಗಿ ಕುರುಬರಲ್ಲಿರುವ ಬೆಡಗುಗಳನ್ನು ಅವಲೋಕಿಸಿದರೆ ವಿವಾಹ ಸಂಬಂಧಗಳನ್ನು ನಿರ್ಣಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇವರಲ್ಲಿರುವ ಬೆಡಗುಗಳಲ್ಲಿ ಪಶು, ಪಕ್ಷಿ, ಆಯುಧ, ಲೋಹ, ಧಾತು, ಊರು ಕೇರಿಗಳ ಹೆಸರೂ ಸೇರಿಕೊಂಡಿವೆ. ಅಣ್ಣಿ, ಅತ್ತಿ, ಅರಳಿ, ನುಗ್ಗಿ, ನೆಲ್ಲಿ, ಹತ್ತಿ, ಬನ್ನಿ ಎಂಬ ಗಿಡಮರ ಸೂಚಿ ಬೆಡಗುಗಳೂ, ಎಮ್ಮೆ, ಚೇಳು, ನವಿಲು, ಗೀಜಗದಂತಹ ಪಶುಪಕ್ಷಿ ಸೂಚಿ ಬೆಡಗುಗಳೂ, ಕುಂದಣ, ಸುವರ್ಣ, ಕೆಂಗಲ್ಲಂತಹ ಲೋಹ ಸೂಚಿ ಬೆಡಗುಗಳೂ, ಕತ್ತಿ, ಕೊಡಲಿ, ಚೂರಿಯಂತಹ ಆಯುಧ ಸೂಚಿ ಬೆಡಗುಗಳೂ, ಕಂಬಳಿ, ಕೋರಿ, ಗೊಂಗಡಿಯಂತಹ ವಸನ ಸೂಚಿ ಬೆಡಗುಗಳೂ ದಟ್ಟೈಸಿ ಬಳಕೆಗೊಂಡಿರುವುದನ್ನು ಕುರುಬ ಸಮುದಾಯದಲ್ಲಿ ಗುರುತಿಸಬಹುದು.

ವಕ್ತೃ : ಎನ್.ಬಿ.ಸಿದ್ಧಯ್ಯ.ಬಿ.ಎನ್.
ನಿವೃತ್ತ ಮುಖ್ಯೋಪಾಧ್ಯಾಯರು.